# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬಿ12(5ಜಿ)ಪಿಆರ್ 41 /12--13

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 02/6/12

## ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಗ್ರೂಪ್ 'ಡಿ' ನೌಕರರು ಗುರುತಿನ ಚೀಟಿಯೊಂದಿಗೆ ಸಮವಸ್ತ್ರ ಧರಿಸಿ ಕಛೇರಿಗಳಿಗೆ ಹಾಜರಾಗುವ ಬಗ್ಗೆ.

- - - -

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ 'ಡಿ' ನೌಕರರು ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸಿಕೊಂಡು, ಕಛೇರಿಗೆ ಹಾಜರಾಗಲು ಸೂಚಿಸಲಾಗಿದ್ದರೂ ಸಹ, ಹಲವು ಮಂದಿ ಗ್ರೂಪ್ ಡಿ ನೌಕರರು ಸಮವಸ್ತ್ರ ಧರಿಸದೇ ಕಛೇರಿಗಳಿಗೆ ಹಾಜರಾಗುತ್ತಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಎಲ್ಲಾ ಗ್ರೂಪ್ 'ಡಿ' ನೌಕರರು ಕಡ್ಡಾಯವಾಗಿ ಗುರುತಿನ ಚೀಟಿಯೊಂದಿಗೆ ಸಮವಸ್ತ್ರ ಧರಿಸಿ ಕಛೇರಿಗೆ ಹಾಜರಾಗಲು ಸೂಚಿಸಲಾಗಿದೆ. **ತಪ್ಪಿದಲ್ಲಿ ನೀಡಲಾಗಿರುವ ಸಮವಸ್ತ್ರ ಭತ್ಯೆಯನ್ನು ಹಿಂಪಡೆಯಲಾಗುವುದೆಂದು ಈ ಸುತ್ತೋಲೆ ಮೂಲಕ ತಿಳಿಯಪಡಿಸಿದೆ.** ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಗುರುತಿನ ಚೀಟಿಯೊಂದಿಗೆ ಸಮವಸ್ತ್ರ ಧರಿಸದೇ ಕಛೇರಿಗೆ ಹಾಜರಾಗುವ ಗ್ರೂಪ್ 'ಡಿ' ನೌಕರರುಗಳ ಮಾಹಿತಿಗಳನ್ನು ತಪ್ಪದೇ ಆಯುಕ್ತರ ಕಛೇರಿಯ ಆಡಳಿತ ಶಾಖೆಗೆ ಒದಗಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಮಾನ್ಯ ಅಪರ ಆಯುಕ್ತರು (ಆಡಳಿತ)
ರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು : ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಲಯ ಅಪರ ಆಯುಕ್ತರು/ಜಂಟಿ ಆಯುಕ್ತರು ಗಳಿಗೆ ಮಾಹಿತಿಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿ, ರವರಿಗೆ ಕಳುಹಿಸುತ್ತಾ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರು ರವರ ಅವಗಾಹನೆಗೆ ತರಲು ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
: ಅಧಿಕ ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
: ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸಿದೆ.
: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸುತ್ತಾ ಕಛೇರಿಗಳ ನಾಮಫಲಕಗಳಲ್ಲಿ ಅಳವಡಿಸಲು ಸೂಚಿಸಲಾಗಿದೆ.
ಕಛೇರಿ ಪ್ರತಿ

Office of the I T Advisor
No. 212
Date. 6/6/12
B... Bengaluru Mahanagara Palike

SDM/